# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 17 ಪ್ರಾ.ಸಾ. : 06**

| | | |
|---|---|---|
| ಸಾಕ್ಷಿಯ ಹೆಸರು | : | ಅಬ್ದುಲ್ ಖಾದರ್ ಶೌಖತ್ ಅಲಿ ಶೇಖ |
| ತಂದೆಯ ಹೆಸರು | : | ಶೌಖತ್ ಅಲಿ ಶೇಖ |
| ವಯಸ್ಸು | : | 32 ವರ್ಷ |
| ಕೆಲಸ | : | ಆಟೋ ಚಾಲಕ |
| ವಾಸ | : | ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 07-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಅಬುತಾಲಿಬ್ ನನ್ನ ಚಿಕ್ಕಪ್ಪ, ಚಾಸಾ-1 ನನ್ನ ಚಿಕ್ಕಮ್ಮ, ಅವರಿಗೆ 3 ಜನ ಮಕ್ಕಳು, ಅವರು ಚಂದಾವರದ ಜನತಾ ಕಾಲೋನಿಯಲ್ಲಿ ವಾಸವಾಗಿರುತ್ತಾರೆ. ನಮ್ಮ ಮನೆಯ ಹಿಂದಿನ ಓಣಿಯಲ್ಲಿ ಅಬುತಾಲಿಬ್ ರವರ ಮನೆ ಇರುತ್ತದೆ. ಚಾಸಾ-10 ರಿಂದ ಚಾಸಾ-26 ರವರು ನನಗೆ ಗೊತ್ತು. ಚಾಸಾ-14 ರವರ ಮನೆ ಅಬುತಾಲಿಬ್ ರವರ ಮನೆಯ ಹಿಂದಿನ ಓಣಿಯಲ್ಲಿರುತ್ತದೆ. ನಮ್ಮ ಮನೆಯಿಂದ ಚಾಸಾ-14 ರವರ ಮನೆಗೆ ಕಾಲು ದಾರಿಯಲ್ಲಿ ಹೋದರೆ ಸುಮಾರು 100 ಮೀಟರ್ ಆಗುತ್ತದೆ ಹಾಗೂ ರಸ್ತೆಯ ಮೂಲಕ ಹೋದರೆ 500 ಮೀಟರ್ ಆಗುತ್ತದೆ. ಆರೋಪಿ ನನಗೆ ಗೊತ್ತು, ಆತ ನಮ್ಮ ಚಾಸಾ-14 ರವರ ಪಕ್ಕದ ಮನೆಯವನು.

2. ದಿಃ 03-05-2021 ರಂದು ಮದ್ಯಾಹ್ನ ಸುಮಾರು 01-00 ಗಂಟೆಗೆ ನಾನು ನನ್ನ ರಿಕ್ಷಾವನ್ನು ಓಣಿಯಲ್ಲಿ ನಿಲ್ಲಿಸಿ, ಮನೆಗೆ ಹೋಗುತ್ತಿದ್ದಾಗ, ಚಾಸಾ-14 ರವರ ಮನೆಯ ಕಡೆಯಿಂದ ಗಲಾಟೆಯಾಗುತ್ತಿರುವ ಶಬ್ದ ಕೇಳಿಸಿದ್ದು ಹಾಗೂ ಕೇರಿಯ ಜನರು ಚಾಸಾ-14 ರವರ ಮನೆಯ ಹತ್ತಿರ ಗಲಾಟೆಯಾಗುತ್ತಿದೆ ಎಂದು ಹೇಳಿದ್ದು, ನಾನು ಚಾಸಾ-14 ರವರ ಮನೆಯ ಹತ್ತಿರ ಹೋಗಿ ನೋಡಿರುತ್ತೇನೆ. ಅಲ್ಲಿ ಚಾಸಾ-14 ರವರ ಮನೆಯ ಮುಂದಿನ ರಸ್ತೆಯ ಮೇಲೆ ಮೃತ ಅಬುತಾಲಿಬ್ ಹಾಗೂ ಆರೋಪಿಯ ನಡುವೆ ಜಗಳವಾಗುತ್ತಿತ್ತು, ಆ

ಸಮಯದಲ್ಲಿ ಅಬುತಾಲಿಬ್ ರವರು ಆರೋಪಿಗೆ "ನೀನು ಯಾಕೆ ಕೇರಿಯ ಹೆಣ್ಣು ಮಕ್ಕಳಿಗೆ ತೊಂದರೆ ಕೊಡುತ್ತೀಯಾ? ಹಾಗೂ ಚಾಸಾ–15 ರವರಿಗೆ ಯಾಕೆ ನೀನು ಲುಂಗಿ ತೋರಿಸಿದೆ ಎಂದು ಕೇಳುತ್ತಿದ್ದು, ಅದಕ್ಕೆ ಉತ್ತರವಾಗಿ ಆರೋಪಿ ನಾನು ಏನು ಬೇಕಾದರೂ ಮಾಡಿಕೊಳ್ಳುತೇನೆ, ಅದನ್ನು ಕೇಳುವುದಕ್ಕೆ ನೀನು ಯಾರು, ರಾಂಡ್ ಕೆ ಬೇಟೆ, ಚಿನಾಲ್ಕೆ ಬೇಟೆ, ನಾನು ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಹೇಳುತ್ತಿದ್ದ ಆಗ ಅಬುತಾಲಿಬ್ ರವರು ನೀನು ಇದೇ ರೀತಿ ಮಾಡುತ್ತಿದ್ದರೆ, ನಿನ್ನ ಮೇಲೆ ಪೊಲೀಸ್ ಠಾಣೆಗ ದೂರು ಕೊಟ್ಟು, ನಿನನ್ನು ಜೈಲಿಗೆ ಹಾಕಿಸಬೇಕಾಗುತ್ತದೆ" ಎಂದು ಹೇಳುತ್ತಿದ್ದರು.

3. ಆ ನಂತರ ಆರೋಪಿ ಅಬುತಾಲಿಬ್ ರವರಿಗೆ ರಾಂಡ್ ಕೆ ಬೇಟೆ ನಿನಗೆ ತೋರಿಸುತ್ತೇನೆ ಇರು ಎಂದು ಹೇಳಿ, ತನ್ನ ಮನೆಯ ಒಳಗೆ ಹೋಗಿ, ಚಾಕುವನ್ನು ಹಿಡಿದುಕೊಂಡು ಬಂದನು, ಆತನ ಕೈಯಲ್ಲಿದ್ದ ಚಾಕುವನ್ನು ನೋಡಿ, ಅಲ್ಲಿ ಸೇರಿದ್ದ ಜನರ ಹಿಂದೆ ಸರಿದರು ಹಾಗೂ ಚಾಸಾ–11 ಮತ್ತು 12 ರವರು ಆರೋಪಿಗೆ ನೀನು ಆ ರೀತಿ ಎಲ್ಲಾ ಮಾಡಬೇಡ ಎಂದು ಸಮಾಧಾನ ಮಾಡುತ್ತಿದ್ದರು, ಆದರೂ ಸಹ ಆರೋಪಿ ಅಬುತಾಲಿಬ್ ರವರಿಗೆ ಚಾಕು ತೋರಿಸಿ, ನೀನು ಬೇರೆಯವರ ವಿಷಯಕ್ಕೆ ಬಂದರೆ, ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ, ಆಗ ಮೃತ ಅಬುತಾಲಿಬ್ ರವರು ಅಲ್ಲಿಯೇ ಪಕ್ಕದಲ್ಲಿ ಬಿದ್ದಿದ್ದ ಅಡಿಕೆ ಮರದ ದಬ್ಬೆಯನ್ನು ಎತ್ತಿಕೊಂಡು, ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಬೀಳಿಸಲು, ಆತ ಚಾಕು ಹಿಡಿದುಕೊಂಡಿದ್ದ ಕೈ ಮೇಲೆ ಹೊಡೆದರು, ಆಗ ಆರೋಪಿ ತನ್ನ ಕೈಯಲ್ಲಿದ್ದ ಚಾಕುವಿನಿಂದ ಅಬುತಾಲಿಬ್ ರವರಿಗೆ ನಿನ್ನ ಜೀವ ತೆಗೆಯುತ್ತೇನೆ ಎಂದು ಹೇಳುತ್ತಾ, ಅವರ ಎದೆಗೆ ಚಾಕುವಿನಿಂದ ಚುಚ್ಚಿದ, ಆ ನಂತರ ತನ್ನ ಕೈಯಲ್ಲಿದ್ದ ಚಾಕುವನ್ನು ಹಿಡಿದುಕೊಂಡು, ಮನೆಯ ಕಡೆಗೆ ಹೋದನು. ಆಗ ಸಮಯ ಮದ್ಯಾಹ್ನ 01–15 ಗಂಟೆ ಆಗಿರುತ್ತದೆ. ಆರೋಪಿಯು ಅಬುತಾಲಿಬ್ ರವರ ಎದೆಗೆ ಚಾಕುವಿನಿಂದ ಚುಚ್ಚಿದ ಕಾರಣ, ಅವರ ಎದೆಯಿಂದ ರಕ್ತ ಬಂದಿತು ಹಾಗೂ ಅವರು ಅಲ್ಲಿಯೇ ಕೆಳಗೆ ಕುಸಿದು ಬಿದ್ದರು. ಅಲ್ಲಿ ಸೇರಿದ್ದ ಜನರೆಲ್ಲರೂ ಸೇರಿ ಅಬುತಾಲಿಬ್ ರವರಿಗೆ ನೀರು ಕುಡಿಸಿದರು ಹಾಗೂ ಅಲ್ಲಿಯೇ ಸ್ಥಳದಲ್ಲಿದ್ದ ಅಬುತಾಲಿಬ್ ರವರ ಹೆಂಡತಿ ಚಾಸಾ–1, ಅವರ ಮಗ ಚಾಸಾ–19, ಚಾಸಾ–13 ರವರು ಸೇರಿ ಅಬುತಾಲಿಬ್ ರವರನ್ನು ಚಾಸಾ–16 ರವರ ಆಟೋದಲ್ಲಿ ಕುಮಟಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

4. ಆ ನಂತರ ನಾನೂ ಸಹ ಕುಮಟಾ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ವೈದ್ಯರು ಅಬುತಾಲಿಬ್ ರವನ್ನು ಪರೀಕ್ಷಿಸಿ, ಮೃತರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಆಗ ಸಮಯ ಮದ್ಯಾಹ್ನ 01-50 ಗಂಟೆ ಆಗಿರುತ್ತದೆ. ಈ ಘಟನೆ ನಡೆಯುವ ಮೊದಲೂ ಸಹ 2-3 ಬಾರಿ ಆರೋಪಿ ಕೇರಿಯ ಹೆಣ್ಣು ಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸುವುದು, ಲುಂಗಿ ಎತ್ತಿ ತೋರಿಸುವುದು, ಕೈ ಸನ್ನೆ ಹಾಗೂ ಕಣ್ಣು ಸನ್ನೆ ಮಾಡುವುದು ಹಾಗೂ ಬಾ ಎಂದು ಕರೆಯುವುದು ಮಾಡುತ್ತಿದ್ದ. ಆದ ಕಾರಣ ಆತನಿಗೆ ಬುದ್ದಿವಾದ ಹೇಳಲಾಗಿತ್ತು ಎಂದು ಅಬುತಾಲಿಬ್ ರವರು ನನ್ನ ಬಳಿ ಹೇಳಿದ್ದರು. ಅದಲ್ಲದೇ ಆರೋಪಿ ಯಾವಾಗಲೂ ತನ್ನ ಬಳಿ ಚಾಕುವನ್ನು ಇಟ್ಟುಕೊಂಡು ಓಡಾಡುತ್ತಿದ್ದನು. ಘಟನಾ ದಿನ ಚಾಸಾ-15 ರವರು ಬಟ್ಟೆ ತೊಳೆಯಲು ಚಾಸಾ-14 ರವರ ಮನೆಗೆ ಹೋದಾಗ, ಆರೋಪಿಯು ಚಾಸಾ-15 ರವರಿಗೆ ಲುಂಗಿ ಎತ್ತಿ ತೋರಿಸಿ, ಕೈ ಸನ್ನೆ ಹಾಗೂ ಕಣ್ಣು ಸನ್ನೆ ಮಾಡಿ, ಬಾ ಎಂದು ಕರೆಯುತ್ತಾ ಅಸಭ್ಯವಾಗಿ ವರ್ತಸಿದ್ದು, ಈ ವಿಷಯದ ಬಗ್ಗೆ ಅಬುತಾಲಿಬ್ ರವರು ಆರೋಪಿಯನ್ನು ಕೇಳಲು ಹೋಗಿರುತ್ತಾರೆ ಎಂದು ನನಗೆ ತಿಳಿದು ಬಂತು. ಆ ಸಮಯದಲ್ಲಿ ಈ ಘಟನೆ ನಡೆದಿರುತ್ತದೆ.

5. ಘಟನಾ ಸಮಯದಲ್ಲಿ ಚಾಸಾ-10 ರವರು ಘಟನೆಯ ದೃಶ್ಯವನ್ನು ತಮ್ಮ ಮೊಬೈಲ್ ನಿಂದ ವಿಡಿಯೋ ಮಾಡಿದ್ದು, ಆ ವಿಡಿಯೋವನ್ನು ಚಾಸಾ-10 ರವರು ನಮ್ಮೆಲ್ಲರಿಗೂ ತೋರಿಸಿರುತ್ತಾನೆ. ಘಟನಾ ಸಮಯದಲ್ಲಿ ಅಬುತಾಲಿಬ್ ರವರು ಪಿಂಕ್ ಬಣ್ಣದ ಅಂಗಿ ಹಾಗೂ ಲುಂಗಿಯನ್ನು ಧರಿಸಿದ್ದರು ಹಾಗೂ ಆರೋಪಿ ಅಂಗಿ ಹಾಗೂ ಕಪ್ಪು ಹಾಗೂ ಬಿಳಿ ಬಣ್ಣದ ಚೌಕಳಿ ಲುಂಗಿಯನ್ನು ಧರಿಸಿದ್ದನು. ಈ ಘಟನೆಯನ್ನು ನೋಡಿದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-7 ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಘಟನಾ ಸಮಯದಲ್ಲಿ ಅಬುತಾಲಿಬ್ ರವರ ಕೈಯಲ್ಲಿದ್ದ ದೊಣ್ಣೆ ಎಂದು ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-2 ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಘಟನಾ ಸಮಯದಲ್ಲಿ ಆರೋಪಿಯ ಕೈಯಲ್ಲಿದ್ದ ಚಾಕು ಎಂದು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಅಬುತಾಲಿಬ್ ರವರ ಬಟ್ಟೆಗಳಾದ ಮುದ್ದೆ ಮಾಲು-8 ಲುಂಗಿ ಮತ್ತು ಮುದ್ದೆ ಮಾಲು-9 ಅಂಗಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಆರೋಪಿಯ ಬಟ್ಟೆಗಳಾದ ಮುದ್ದೆ ಮಾಲು-1 ಅಂಗಿ ಮತ್ತು ಮುದ್ದೆ ಮಾಲು-3 ಲುಂಗಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಸಾಕ್ಷಿಯು ಚಾಸಾ-10 ರವರಿಗೆ

ಸೇರಿದ ಮುದ್ದೆ ಮಾಲು-11 ಮೊಬೈಲ್ ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮುದ್ದೆ ಮಾಲು-11 ಮೊಬೈಲ್ ನಲ್ಲಿರುವ ವಿಡಿಯೋವನ್ನು ಸಾಕ್ಷಿಗೆ ತೋರಿಸಲಾಗಿ, ಅದನ್ನು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ ವಕೀಲರಿಂದ**

6. ಚಾಸಾ-10 ಮತ್ತು 15 ರವರು ಚಾಸಾ-14 ರವರ ಸಂಬಂಧಿ. ಚಾಸಾ-11 ರವರು ಚಾಸಾ-14 ರವರ ಗಂಡನ ಸಂಬಂಧಿಕರು. ಚಾಸಾ-12 ರವರು ಚಾಸಾ-14 ರವರ ಸಬಂಧಿಕರು ಎಂದರೆ ಸರಿಯಲ್ಲ. ಚಾಸಾ-13 ರವರು ಚಾಸಾ-14 ರವರ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ-16 ರವರು ಚಾಸಾ-14 ರವರಿಗಾಗಲೀ ಅಥವಾ ಚಾಸಾ-10 ರವರಿಗಾಗಲೀ ಸಂಬಂಧಿಕರಲ್ಲ. ಚಾಸಾ-18 ರವರು ಚಾಸಾ-14 ರವರ ಸಂಬಂಧಿಕರಲ್ಲ. ಚಾಸಾ-20 ರವರು ಮೃತ ಅಬುತಾಲಿಬ್ ರವರಿಗೆ ಬಹಳ ಬೇಕಾದವರು ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-20 ರವರು ಚಾಸಾ-14 ರವರಿಗೂ ಸಹ ಬಹಳ ಬೇಕಾದವರು ಎಂದರೆ ಸಾಕ್ಷಿಯು ಅವರು ಸಂಬಂಧಿಕರು ಆಗಿರುತ್ತಾರೆ ಆದರೆ ಅವರ ನಡುವೆ ಜಗಳವಿರುತ್ತದೆ. ಚಾಸಾ-21 ರಿಂದ ಚಾಸಾ-26 ರವರು ಚಾಸಾ-14 ರವರಿಗೆ ಸಂಬಂಧಿಕರು ಎಂದರೆ ಸರಿಯಲ್ಲ.

7. ನನ್ನ ಮೇಲೆ ಒಂದು ಅತ್ಯಾಚಾರದ ಕ್ರಿಮಿನಲ್ ಪ್ರಕರಣ ಇದೇ ನ್ಯಾಯಾಲಯದಲ್ಲಿ ಇರುತ್ತದೆ ಎಂದರೆ ಸರಿ. ನಮ್ಮ ಕೇರಿಯಲ್ಲಿ ಸುಮಾರು 100 ರಿಂದ 150 ಜನರು ಇರುತ್ತಾರೆ. ಚಾಸಾ-16 ರವರ ಮನೆಯಿಂದ ನಮ್ಮ ಮನೆ 8 ರಿಂದ 10 ಮನೆಗಳ ಅಂತರದಲ್ಲಿರುತ್ತದೆ. ಚಾಸಾ-14 ರವರ ಮನೆಯಿಂದ ಚಾಸಾ-16 ರವರ ಮನೆ ಇಲ್ಲಿಂದ ಸರ್ಕಲ್ ವರೆಗೆ ಇರುತ್ತದೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಸುಮಾರು 70-80 ಜನರು ಸೇರಿದ್ದರು. ಅಲ್ಲಿ ಗುಂಪು ಸೇರಿದ್ದರು ಎಂದರೆ ಸರಿ. ಅಲ್ಲಿ ಗುಂಪು ಸೇರಿದ್ದರಿಂದ ಯಾರು-ಯಾರು, ಏನೇನು ಮಾತನಾಡುತ್ತಿದ್ದರು ಎಂದು ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಅಬುತಾಲಿಬ್ ರವರು ಸಿಟ್ಟಿನಿಂದ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-14 ರವರ ಮನೆಯ ಮುಂದುಗಡೆ ಸುಮಾರು ಗಿಡಗಳು ಇರುತ್ತವೆ ಎಂದರೆ ಸರಿಯಲ್ಲ. ಅಲ್ಲಿ ಅಡಿಕೆ ಮರಗಳೂ ಸಹ ಇರುತ್ತವೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ನನ ಚಿಕ್ಕಪ್ಪ ಅಬುತಾಲಿಬ್ ರವರಿಗೆ ಯಾವುದೇ ರೀತಿಯ ಸಮಾಧಾನ ಮಾಡಿರುವುದಿಲ್ಲ. ನಾನು ಘಟನಾ ಸ್ಥಳದಿಂದ 10

ಅಡಿ ದೂರದಲ್ಲಿ ನಿಂತಿದ್ದೆ. ನಾನು ನಿಂತ ಜಾಗದಲ್ಲಿ ನನ್ನ ಮುಂದುಗಡೆ ಬಹಳ ಜನರು ನಿಂತಿದ್ದರು ಎಂದರೆ ಸರಿಯಲ್ಲ. ಆರೋಪಿಯು ಅಬುತಾಲಿಬ್ ರವರಿಗೆ ರಾಂಡ್ ಕೆ ಬೇಟೆ ಎಂದು ಬೈದ ಬಗ್ಗೆ ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ. ಚಿನಾಲ್ಕೆ ಬೇಟೆ ಎಂದು ಬೈದ ಬಗ್ಗೆ ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ.

8. ನಾನು ಆಸ್ಪತ್ರೆಗೆ ಹೋದಾಗ, ಅಲ್ಲಿ ಪೊಲೀಸರು ಬಂದಿದ್ದರು. ಆಸ್ಪತ್ರೆಯಲ್ಲಿ ಘಟನೆಯ ಬಗ್ಗೆ ಪೊಲೀಸರ ಬಳಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಘಟನೆಯ ದಿನವೇ ನಾನು ಪೊಲೀಸರನ್ನು ಭೇಟಿ ಮಾಡಿ, ಹೇಳಿಕೆಯನ್ನು ನೀಡಿರುತ್ತೇನೆ. ಘಟನೆಯ ದೃಶ್ಯವನ್ನು ಚಾಸಾ–10 ರವರ ಮೊಬೈಲ್ ನಲ್ಲಿ ಅದೇ ದಿನ ನೋಡಿರುತ್ತೇನೆ. ವಿಡಿಯೋವನ್ನು ಪೊಲೀಸರೂ ಸಹ ನೋಡಿರುತ್ತಾರೆ. ನನ್ನ ಚಿಕ್ಕಪ್ಪ ಮೃತ ಅಬುತಾಲಿಬ್ ರವರು ಮೊದಲು ಆರೋಪಿಯ ಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಅಬುತಾಲಿಬ್ ರವರು ಸಿಟ್ಟಿನಿಂದಲೇ ತನ್ನ ಎರಡು ಕೈಗಳನ್ನು ಮೇಲೆ ಎತ್ತಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾರಾದರೂ ಸಿಟ್ಟಿನಿಂದ ಹೊಡೆಯ ಬೇಕಾದರೆ ಎರಡು ಕೈಗಳನ್ನು ಮೇಲೆ ಎತ್ತಿ ಹೊಡೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಹೊಡೆದ ಏಟು ಆರೋಪಿಯ ತಲೆಗೆ ಬಿದ್ದಿದ್ದರೆ ಆರೋಪಿಯು ಮೃತ ಪಡುವ ಸಾಧ್ಯತೆ ಇತ್ತು ಎಂದರೆ ಸರಿಯಲ್ಲ. ಮೃತ ಅಬುತಾಲಿಬ್ ರವರು ನನ್ನ ಚಿಕ್ಕಪ್ಪನಾದ ಕಾರಣ ಆರೋಪಿಗೆ ಶಿಕ್ಷೆಯಾಗಲೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಈ ಮೊದಲೂ ಸಹ ತೊಂದರೆ ಕೊಟ್ಟ ಬಗ್ಗೆ ಪೊಲೀಸರ ಮುಂದೆ ಹೇಳಿದ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿಯು ಚಾಕುವನ್ನು ತೆಗೆದುಕೊಂಡು ತಿರುಗಾಡುತ್ತಿದ್ದ ವಿಚಾರವನ್ನೂ ಸಹ ಪೊಲೀಸರ ಮುಂದೆ ನಾನು ಹೇಳಿಲ್ಲ. ಆರೋಪಿಯು ತೊಂದರೆ ಕೊಡುತ್ತಿದ್ದ ಬಗ್ಗೆ ನಾನು ಪೊಲೀಸರ ಮುಂದೆ ಯಾವುದೇ ದೂರು ನೀಡಿಲ್ಲ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಚಾಕುವನ್ನು ಹಿಡಿದು ಓಡಾಡುತ್ತಿದ್ದರೆ, ಆ ವಿಷಯವನ್ನು ಪೊಲೀಸರಿಗೆ ತಿಳಿಸುವುದು ನಮ್ಮ ಕರ್ತವ್ಯ ಎಂದರೆ ಸರಿ.

9. ಆರೋಪಿ ಎಂದಿಗೂ ಚಾಕು ತೆಗೆದುಕೊಂಡು ತಿರುಗಾಡುತ್ತಿರಲಿಲ್ಲ, ಕೇರಿಯ ಹೆಣ್ಣು ಮಕ್ಕಳಿಗೆ ತೊಂದರೆ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ಎಂದಿಗೂ ನನ್ನ ಚಿಕ್ಕಪ್ಪನಿಗೆ ಚಿನಾಲ್ಕೆ ಬೇಟೆ, ರಾಂಡ್ ಕೆ ಬೇಟೆ ಎಂದು ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಾಕುವನ್ನು ಹಿಡಿದು ಬಂದು, ನನ್ನ ಚಿಕ್ಕಪ್ಪನಿಗೆ ಕೊಲೆ ಮಾಡುತ್ತೇನೆ ಎಂದು ಹೆದರಿಸಿಲ್ಲ ಎಂದರೆ

ಸರಿಯಲ್ಲ. ನನ್ನ ಚಿಕ್ಕಪ್ಪನಿಗೆ ಆರೋಪಿ ಚಾಕುವಿನಿಂದ ತಿವಿದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಆರೋಪಿಗೆ ಹೊಡೆಯುವ ಸಮಯದಲ್ಲಿ ಆತ ತನ್ನ ರಕ್ಷಣೆಗಾಗಿ ನನ್ನ ಚಿಕ್ಕಪ್ಪನನ್ನು ದೂಡಿ ಹಾಕಿದ ಕಾರಣ, ಆತ ಕೆಳಗೆ ಕಲ್ಲಿನ ಮೇಲೆ ಬಿದ್ದು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-14 ರವರ ಮನೆಗೆ ನನ್ನ ಚಿಕ್ಕಪ್ಪನ ಮನೆಯವರು ನೀರು ತರಲು ಹೋಗುತ್ತಿದ್ದರು ಎಂದರೆ ಸರಿ. ಚಾಸಾ-14 ರವರ ಮನೆಗೆ ಬಹಳಷ್ಟು ಜನರು ಅಪರಿಚಿತರು ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-14 ರವರ ಮನೆಗೆ ಅಪರಿಚಿತರು ಬಂದು ಹೋಗುತ್ತಿದ್ದ ಕಾರಣ, ಆರೋಪಿಯು ಚಾಸಾ-14 ರವರಿಗೆ ಪ್ರಶ್ನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಚಾಸಾ-14 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದ ಮಾಲಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-11 ಮೊಬೈಲ್ ನಲ್ಲಿರುವ ವಿಡಿಯೋಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಎಂದಿಗೂ ತನ್ನ ಮನೆಯಿಂದ ಚಾಕುವನ್ನು ತಂದು ನನ್ನ ಚಿಕ್ಕಪ್ಪನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ